ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-3 Issue 1, July-August, 94-97
©*IIMRD*, Mysuru

IIMRD JOURNALS

www.iimrd.com

# ಸಂಯುಕ್ತ ಅರಬ್ ಸಂಸ್ಥಾನದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಜಾಗತೀಕರಣದ ಪಾತ್ರ : ಒಂದು ಅಧ್ಯಯನ

**ರಂಗನಾಥಸ್ವಾಮಿ***

*ಸಂಶೋಧನಾ ವಿದ್ಯಾರ್ಥಿ, ಪಶ್ಚಿಮ ಏಷ್ಯಾ ಅಧ್ಯಯನ, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.

***ಸಾರಾಂಶ* (Abstract)**

*ಸಂಯುಕ್ತ ಅರಬ್ ಸಂಸ್ಥಾನ(United Arab Emirates)ವು ಪಶ್ಚಿಮ ಏಷ್ಯಾದ ಒಂದು ದೇಶವಾಗಿದ್ದು, ಅರೇಬಿಯನ್ ಪರ್ಯಾಯ ದ್ವೀಪದ ಪೂರ್ವ ತುದಿಯಲ್ಲಿದೆ. ಇದು ಒಮಾನ್ ಮತ್ತು ಸೌದಿ ಅರೇಬಿಯಾ ಗಡಿಯನ್ನು ಹೊಂದಿದ್ದು, ಕತಾರ್ ಮತ್ತು ಇರಾನ್‌ನೊಂದಿಗೆ ಪರ್ಷಿಯನ್ ಕೊಲ್ಲಿಯಲ್ಲಿ ಸಮುದ್ರಗಡಿಯನ್ನು ಹೊಂದಿದೆ. ಸಂಯುಕ್ತ ಅರಬ್ ಸಂಸ್ಥಾನವು ಮೊದಲು ಒಕ್ಕೂಟ ರಾಷ್ಟ್ರವಾಗಿರಲಿಲ್ಲ. ನಂತರ ಡಿಸೆಂಬರ್ 2, 1971ರಲ್ಲಿ ಸ್ವತಂತ್ರ, ಸಾರ್ವಭೌಮ ಮತ್ತು ಫೆಡರಲ್ ರಾಜ್ಯವೆಂದು ಘೋಷಿಸಲಾಯಿತು. ಸಂಯುಕ್ತ ಅರಬ್ ಸಂಸ್ಥಾನವು ಅಬುದಾಬಿ, ದುಬೈ, ಶಾರ್ಜಾ, ರಾಸ್–ಅಲ್–ಖೈಮಾ, ಅಜ್ಮಾನ್, ಉಮ್ ಅಲ್ ಕ್ವೈನ್ ಮತ್ತು ಪುಜೈರಾ ಸಂಸ್ಥಾನಗಳನ್ನು ಒಳಗೊಂಡಂತೆ ಒಟ್ಟು 7 ಸಂಸ್ಥಾನಗಳನ್ನು ಒಳಗೊಂಡಿದೆ. ಪ್ರಸ್ತುತ ಲೇಖನದಲ್ಲಿ ಸಂಯುಕ್ತ ಅರಬ್ ಸಂಸ್ಥಾನಗಳ ಸಾಮಾಜಿಕ ಬದಲಾವಣೆಯಲ್ಲಿ ಜಾಗತೀಕರಣದ ಪಾತ್ರವೇನು ಎಂಬುದನ್ನು ಅಧ್ಯಯನ ಮಾಡಲಾಗಿದೆ.*

***ಮುಖ್ಯ ಪದಗಳು* (Keywords):** ಸಂಯುಕ್ತ ಅರಬ್ ಸಂಸ್ಥಾನ, ಜಾಗತೀಕರಣ, ಸಾಮಾಜಿಕ ಬದಲಾವಣೆ.

## ಪೀಠಿಕೆ

ಟ್ರೂಷಿಯಲ್ ಸ್ಟೇಟ್ಸ್ ಎಂದು ಕರೆಯಲ್ಪಡುವ 07 ಎಮಿರೇಟ್‌ಗಳು 1971ರಲ್ಲಿ ರಚಿಸಿದ ಒಕ್ಕೂಟವಾಗಿ ಅಧ್ಯಕ್ಷ ಮತ್ತು ಪ್ರಧಾನಮಂತ್ರಿಯ ಜೊತೆಗೆ ಅಸ್ತಿತ್ವಕ್ಕೆ ಬಂತು. ಪ್ರತಿ ಎಮಿರೇಟ್‌ಗೆ ಪ್ರತ್ಯೇಕ ಆಡಳಿತಗಾರನಿದ್ದು ಅವರು ಸ್ಥಳೀಯ ಸರ್ಕಾರವನ್ನು ನೋಡಿಕೊಳ್ಳುತ್ತಾರೆ. ಸುಮಾರು ಅರ್ಧ ಶತಮಾನದ ಹಿಂದೆ ಒಕ್ಕೂಟವಾಗಿ ಪ್ರಾರಂಭವಾದಗಿನಿಂದ ಯುಎಇ ಅಭಿವೃದ್ಧಿಯ ಹಲವು ಆಯಾಮಗಳಲ್ಲಿ ತ್ವರಿತ ಪ್ರಗತಿಯನ್ನು ಕಂಡಿದೆ. 84,000 ಚ.ಕಿ.ಮೀ ವಿಸ್ತೀರ್ಣ ಮತ್ತು 10 ಮಿಲಿಯನ್ ಜನಸಂಖ್ಯೆಯನ್ನು ಹೊಂದಿರುವ ಯುಎಇಯ ಆರ್ಥಿಕತೆಯು ಅರಬ್ ಜಗತ್ತಿನಲ್ಲಿ ಎರಡನೇ ಸ್ಥಾನದಲ್ಲಿದೆ. ವೈವಿಧ್ಯಕರಣಕ್ಕೆ ಹೆಚ್ಚಿನ ಒತ್ತು ನೀಡಿ ತೈಲದ ಮೇಲಿನ ಐತಿಹಾಸಿಕ ಅವಲಂಬನೆಯನ್ನು ಕಡಿಮೆ ಮಾಡಿದೆ. ವಿಶ್ವಸಂಸ್ಥೆಯ ಇತ್ತೀಚಿನ ವರದಿಯ ಪ್ರಕಾರ ಯುಎಇಯ ಮಾನವ ಅಭಿವೃದ್ಧಿ ಸೂಚ್ಯಂಕ(Human Development Index)ವು ಉತ್ತಮ ಸ್ಥಾನದಲ್ಲಿದ್ದು, ಜೀವತಾವಧಿಯ ಮಟ್ಟ, ಜೀವನ ಮಟ್ಟ ಮತ್ತು ಜ್ಞಾನದ ಪ್ರಗತಿಯು ಅರಬ್ ರಾಷ್ಟ್ರಗಳಲ್ಲೆ

*Please cite this article as:* *ರಂಗನಾಥಸ್ವಾಮಿ (2021*). ಸಂಯುಕ್ತ ಅರಬ್ ಸಂಸ್ಥಾನದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯಲ್ಲಿ ಜಾಗತೀಕರಣದ ಪಾತ್ರ : ಒಂದು ಅಧ್ಯಯನ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(1). ಪು.ಸಂ. 94–97*

ಅತ್ಯಧಿಕವಾಗಿದೆ. ಇತ್ತೀಚಿನ ಬೆಳವಣಿಗೆಗಳಿಂದ ಯುಎಇಯಲ್ಲಿ ವಿಜ್ಞಾನ ಮತ್ತು ಸಂಶೋಧನೆಯ ಬಗ್ಗೆ ರಾಷ್ಟ್ರೀಯ ಗಮನವನ್ನು ಹೆಚ್ಚಿಸಿದೆ.

**ಸಂಯುಕ್ತ ಅರಬ್ ಸಂಸ್ಥಾನದ ಆರ್ಥಿಕತೆಯ ಮೇಲೆ ಜಾಗತೀಕರಣದ ಪ್ರಭಾವ**

ವಿಶ್ವದ ಅತ್ಯಂತ ಶ್ರೀಮಂತ ರಾಜ್ಯಗಳಲ್ಲಿ UAE ಕೂಡ ಒಂದಾಗಿದೆ. ಹಿಂದೆ ಈ ಪ್ರದೇಶವು ಬೆಡೋಯಿನ್ ಬುಡಕಟ್ಟು ಸಮುದಾಯದ ನೆಲೆಯಾಗಿತ್ತು ಮತ್ತು ಜೆಸಿಸಿಯಲ್ಲಿ ಸೌದಿ ಅರೇಬಿಯಾದ ನಂತರ ಎರಡನೇ ಅತಿದೊಡ್ಡ ಆರ್ಥಿಕತೆಯಾಗಿದ್ದು, ಕಳೆದ ನಾಲ್ಕು ದಶಕಗಳಲ್ಲಿ ತಮ್ಮ ನಿವ್ವಳ ಜಿಡಿಪಿಯನ್ನು ಮೂರು ಪಟ್ಟು ಹೆಚ್ಚಿಸಿಕೊಂಡಿದೆ. 1975ರಲ್ಲಿ ಕೇವಲ 5,50,000 ಜನಸಂಖ್ಯೆತು ರಿಂದ 2018ರಲ್ಲಿ 10 ದಶ ಲಕ್ಷಕ್ಕೆ ಏರಿದೆ. ಈ ಬೆಳವಣಿಗಯಲ್ಲಿ ಅತಿಮುಖ್ಯವಾಗಿ ವಿದೇಶಿ ಕಾರ್ಮಿಕರ ಪಾಲು ಹೆಚ್ಚಾಗಿದೆ. ಯುಎಇ ಒಂದು ವಿಶಿಷ್ಟವಾದ ಕಾರ್ಮಿಕ ಮಾರುಕಟ್ಟೆ ವ್ಯವಸ್ಥೆಯನ್ನು ಹೊಂದಿದೆ.

2014–2018ರ ನಡುವೆ ಶಿಕ್ಷಣ, ವಸತಿ ಮತ್ತು ಆಹಾರ, ಮಾಹಿತಿ, ಸಂವಹನ, ಕಲೆ, ಮನರಂಜನೆ ಮತ್ತು ರಿಯಲ್ ಎಸ್ಟೇಟ್ ಕ್ಷೇತ್ರಗಳು ಬೆಳವಣಿಗೆಯ ದೃಷ್ಟಿಯಿಂದ ಮೇಲುಗೈ ಸಾಧಿಸಿದೆ. ಆದರೆ ವೃತ್ತಿಪರ ಸೇವೆಗಳು, ಸಾರ್ವಜನಿಕ ತೈಲ ಮತ್ತು ಅನಿಲ ಕ್ಷೇತ್ರಗಳು, ನಿರ್ಮಾಣ ಇಷ್ಟು ಕೂಡ ಉತ್ತಮ ಸಾಧನೆ ತೋರಿದೆ. ವಿಶ್ವಬ್ಯಾಂಕ್ ಪ್ರಕಟ ಪಡಿಸುವ ಡ್ಯೂಯಿಂಗ್ ಬ್ಯುಸಿನೆಸ್ (Doing Business) 2017ರ ವರದಿಯಂತೆ ಯುಎಇ ವ್ಯಾಪಾರ ಮಾಡುವ ವಿಶ್ವದ 26ನೇ ಅತ್ಯುತ್ತಮ ರಾಷ್ಟ್ರವಾಗಿದೆ.

ಯುಎಇಯ ಆರ್ಥಿಕತೆಯು ತೈಲವನ್ನು ಹೆಚ್ಚು ಅವಲಂಬಿಸಿದೆ. ದುಬೈಯನ್ನು ಹೊರತು ಪಡಿಸಿದರೇ ಯುಎಇಯ ಹೆಚ್ಚಿನ ಭಾಗವು ತೈಲದ ಆದಾಯವನ್ನು ಅವಲಂಬಿಸಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲವು ಆರ್ಥಿಕತೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇದರಲ್ಲಿ ಹೆಚ್ಚಿನದಾಗಿ ಗಣನೀಯ ವಾರ್ಷಿಕ ವ್ಯಾಪಾರ ಹಾಗೂ ತಲಾ ಆದಾಯ ಹೊಂದಿದೆ. ಜಿಡಿಪಿಯಲ್ಲಿ ಶೇ.30% ರಷ್ಟು ತೈಲ ಮತ್ತು ಅನಿಲವಿದೆ. ಯುಎಇ ವಿಶ್ವದ ಅತ್ಯಂತ ಮುಕ್ತ ಆರ್ಥಿಕತೆಯನ್ನು ಹೊಂದಿದೆ. ಇದರಲ್ಲಿ ಪ್ರಮುಖವಾಗಿ ಪ್ರವಾಸೋಧ್ಯಮವು ದೊಡ್ಡ ಪಾತ್ರ ವಹಿಸಿದೆ. ಇದಲ್ಲದೆ ಹೆಚ್ಚುವರಿ ಹೈಡ್ರೋಕಾರ್ಬನ್ ನಿಕ್ಷೇಪಗಳ ಅಭಿವೃದ್ಧಿಯನ್ನು ವೇಗಗೊಳಿಸಿದೆ. ಇದರ ಜೊತೆಗೆ ಪರ್ಯಾಯ ಇಂಧನ ಮೂಲಗಳ ಅಭಿವೃದ್ಧಿ ಮತ್ತು ಅನುಷ್ಠಾನಕ್ಕೆ ತನ್ನದೇ ಆದ ಕೊಡುಗೆ ನೀಡಿದೆ. ಇತ್ತೀಚಿನ ದಿನಗಳಲ್ಲಿ ತೈಲದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಯುಎಇ ವೈವಿಧ್ಯೀಕರಣ ಮತ್ತು ಉದಾರೀಕರಣ ಕಾರ್ಯಕ್ರಮವನ್ನು ಪ್ರಾರಂಭಿಸಿದೆ. ಅಂದರೇ ಬಾರೀ ಕೈಗಾರಿಕೆ, ಪೆಟ್ರೋಕೆಮಿಕಲ್ಸ್ ಸಾರಿಗೆ ಮಾನವ ತಂತ್ರಜ್ಞಾನ ಪ್ರವಾಸೋದ್ಯಮ ದೂರಸಂಪರ್ಕ ನವೀಕರಿಸಬಹುದಾದ ಇಂಧನ ವಾಯುಯಾನ ಬಾರೀ ಕೈಗಾರಿಕೆ ತೈಲ ಮತ್ತು ಅನಿಲ ಸೇವೆಗಳು ಸೇರಿದಂತೆ ಕೈಗಾರಿಕೆ ಮತ್ತು ಇತರ ರಫ್ತು ಆಧಾರಿತ ಕ್ಷೇತ್ರಗಳಲ್ಲಿ ಹೂಡಿಕೆಯನ್ನು ಹೆಚ್ಚಿಸಿದೆ. ಈಗಾಗಲೇ ಉಪಗ್ರಹ, ದೂರಸಂಪರ್ಕ, ವಾಯುಯಾನ ಕ್ಷೇತ್ರ ಮತ್ತು ನವೀಕರಿಸಬಹುದಾದ ಇಂಧನಗಳಲ್ಲಿ ಸಾಕಷ್ಟು ಸಾಧಿಸಲಾಗಿದೆ.

ನಾಲ್ಕು ದಶಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆಯೊಂದಿಗೆ ಯುಎಇ ಪಶ್ಚಿಮ ಏಷ್ಯಾದ ಪ್ರಾದೇಶಿಕ ಮತ್ತು ಪ್ರಪಂಚದಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಬದಲಾಗುತ್ತಿರುವ ಸಾಮಾಜಿಕ ಪರಿಸ್ಥಿತಿಗಳಿಂದಾಗಿ

ಪ್ರಾಮುಖ್ಯತೆಯನ್ನು ಪಡೆದು ಕೊಂಡಿದೆ. 1971ರಲ್ಲಿ ಸ್ವತಂತ್ರ ರಾಜ್ಯವಾಗಿ ರೂಪುಗೊಂಡ ಯುಎಇ ಅರಬ್ ಜಗತ್ತಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಏಕೈಕ ಒಕ್ಕೂಟವಾಗಿದೆ. ಅಬುದಾಬಿ ಮತ್ತು ದುಬೈನ ಎರಡು ಶ್ರೀಮಂತ ತೈಲ ಉತ್ಪಾದಕ ಎಮಿರೇಟ್‌ಗಳು ಶಾರ್ಜಾದ ಸಣ್ಣ ಎಮಿರೇಟ್‌ಗಳು ಮತ್ತು ರಾಸ್–ಅಲ್–ಖೈಮಾದ ನಾಲ್ಕು ಹಳ್ಳಿ ರಾಜ್ಯಗಳು ಉಮ್–ಅಲ್–ಖೈವೈನ್, ಅಜ್ಮಾನ್ ಮತ್ತು ಪುಜೈರಾವನ್ನು ಒಳಗೊಂಡಿದೆ. ಇದರಲ್ಲಿ ಅಬುಧಾಬಿ ಮತ್ತು ದುಬೈ ಯುಎಇಯ ಹೆಚ್ಚಿನ ಜನಸಂಖ್ಯೆಯನ್ನು ಹೊಂದಿರುವ 02 ಪ್ರಮುಖ ವಾಣಿಜ್ಯ ಪ್ರದೇಶಗಳಾಗಿವೆ ಅತಿದೊಡ್ಡ ಎಮಿರೇಟ್ ಆಗಿರುವ ಅಬುಧಾಬಿ ಯುಎಇ ರಾಜಧಾನಿಯಾಗಿದ್ದರೆ ದುಬೈ ಹೆಚ್ಚಿನ ಪ್ರಮಾಣದ ಸಾರಿಗೆ ವ್ಯಾಪಾರದಿಂದಾಗಿ ದೇಶದ ಪ್ರಮುಖ ಭಾಗ ಎಂಬ ಖ್ಯಾತಿ ಪಡೆದಿದೆ.

ಈ ಅಧ್ಯಯನವು ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಯುಎಇಯಲ್ಲಿನ ಸಾಮಾಜಿಕ ಬದಲಾಣೆಯ ಪ್ರಾಯೋಗಿಕ ಆವಿಷ್ಕಾರಗಳಿಗೆ ಸೈದ್ಧಾಂತಿಕವಾಗಿ ಪ್ರಯತ್ನಿಸುತ್ತದೆ. ಜಾಗತೀಕರಣವು ಇಲ್ಲಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಮೇಲೆ ಪ್ರಮುಖ ಪಾತ್ರ ವಹಿಸಿದೆ. ಜಾಗತೀಕರಣದ ಪ್ರಭಾವದಿಂದಾಗಿ ಆಧುನಿಕತೆ ಮತ್ತು ಸಾಂಪ್ರಾಯಿಕತೆಯ ನಡುವಿನ ಸಮತೋಲನವನ್ನು ಕಾಪಾಡಲು ಯುಎಇ ಸರ್ಕಾರದ ಕ್ರಮಗಳು ಸವಾಲಾಗಿವೆ. ಯುಎಇ ಕಳೆದ ನಾಲ್ಕು ವರುಷಗಳಲ್ಲಿ ಅರೆ–ಊಳಿಗಮನ್ಯ ಪದ್ಧತಿಯಿಂದ ಮುಂದುವರಿದ ಬಂಡವಾಳಶಾಹಿಗೆ ಬದಲಾಗಿದೆ. ಇಲ್ಲಿನ ವಿಶೇಷ ಭೌಗೋಳಿಕ ಪರಿಸರದಿಂದಾಗಿ ಮತ್ಸ್ಯ ಉದ್ಯಮಕ್ಕೆ ಹೆಸರುವಾಸಿಯಾಗಿದೆ. ಆದಾಗ್ಯೂ ಯುಎಇಯ ಸಾಮಾಜಿಕ ಉತ್ಪಾದನೆಯ ಪ್ರಮುಖ ಸಾಧನವೆಂದರೆ ತೈಲ ಉತ್ಪಾದನೆ ಮತ್ತು ಅದರ ರಪ್ತು, ಜಾಗತೀಕರಣದ ಪ್ರಕ್ರಿಯೆಯಿಂದಾಗಿ ಅಭೂತ ಪೂರ್ವ ಸಂಪತ್ತು ಆರ್ಥಿಕತೆಯ ವೈವಿಧ್ಯೀಕರಣ ಮತ್ತು ವಿದೇಶಿ ನೇರ ಹೂಡಿಕೆಯಿಂದಾಗಿ ಸಾಮಾಜಿಕ ಬದಲಾವಣೆಯ ಪ್ರಕ್ರಿಯೆಗೆ ಪ್ರಚೋದನೆ ನೀಡಲಾಗಿದೆ. ದುಬೈ ಮತ್ತು ಅಬುಧಾಬಿಯು ಎರಡು ಶ್ರೀಮಂತ ಎಮಿರೇಟ್‌ಗಳಿಗೆ ವಿಶೇಷವಾಗಿದೆ. ಯುಎಇ ತನ್ನ ಮಹತ್ವಾಕಾಂಕ್ಷೆಯ ಅಭಿವೃದ್ಧಿ ಯೋಜನೆಗಳಿಂದಾಗಿ ಈಗ ವಿಶ್ವದಾದ್ಯಂತ ಹೆಸರುವಾಸಿಯಾಗಿದೆ. ನಿರ್ದಿಷ್ಟವಾಗಿ ಹೇಳುವುದಾದರೆ ತೈಲ ಸಂಪತ್ತು ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ದುಬೈ ತನ್ನ ಆರ್ಥಿಕತೆಯನ್ನು ವೈವಿಧ್ಯಗೊಳಿಸುವ ಬೃಹತ್ ಅಭಿವೃದ್ಧಿ ಚಾಲನೆಯನ್ನು ಪ್ರಾರಂಭಿಸಿದೆ. ಅತ್ಯುನ್ನತ ಗಗನಚುಂಬಿ ಕಟ್ಟಡಗಳು ಮತ್ತು ಅದ್ಭುತ ವಾಸ್ತುಶಿಲ್ಪದೊಂದಿಗೆ ದುಬೈ ನಿಜವಾದ ಜಾಗತಿಕ ನಗರವಾಗಿ ಮಾರ್ಪಟ್ಟಿದೆ. ಯುಎಇಯ ಆರ್ಥಿಕತೆಯು ಈಗ ವಿಶ್ವ ಆರ್ಥಿಕತೆಗೆ ಸಂಪೂರ್ಣವಾಗಿ ಸಂಯೋಜಿಸಲ್ಪಟ್ಟಿದೆ.

**ಸಂಯುಕ್ತ ಅರಬ್ ಸಂಸ್ಥಾನದ ಸಾಮಾಜಿಕ ಬದಲಾವಣೆಯ ಮೇಲೆ ಜಾಗತೀಕರಣದ ಪ್ರಭಾವ**

ಯುಎಇ ಸಾಮಾಜಿಕ ಬದಲಾವಣೆಯ ಮೇಲೆ ಜಾಗತೀಕರಣದ ಪ್ರಭಾವವನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಪ್ರಮುಖವಾಗಿ ಮೂರು ಅಂಶಗಳು ಕಂಡುಬರುತ್ತವೆ. ಮೊದಲನೆಯದಾಗಿ ಯುಎಇ ಜಾಗತೀಕರಣ ಬದಲಾಯಿಸಲಾಗದ ಹಾದಿಯಲ್ಲಿದೆ. ಎರಡನೆಯದಾಗಿ ಧರ್ಮ ಮತ್ತು ಭಾಷೆಗಳನ್ನೊಳಗೊಂಡಂತೆ ಅವರ ಸಂಪ್ರದಾಯ ಮತ್ತು ಸಂಸ್ಕೃತಿ ಬದಲಾಗದೇ ಇದ್ದರೂ ಎಮೀರೇಟ್‌ಗಳ ಜೀವನ ವಿಧಾನಗಳು ಆಧುನೀಕರಣದತ್ತ ಬದಲಾಗಿವೆ. ಮೂರನೆಯದಾಗಿ ಯುಎಇಯಲ್ಲಿ ಹೆಚ್ಚಿನ

ಜನಸಂಖ್ಯೆಯಲ್ಲಿ ವಲಸಿಗರು ಇರುವುದರಿಂದ ಯುಎಇ ಪ್ರಜೆಗಳು ಸಾಂಪ್ರದಾಯಿಕ ಬುಡಕಟ್ಟು ಕಲಹವನ್ನು ಹೆಚ್ಚಿನ ಪ್ರಮಾಣದಲ್ಲಿ ನಿಗ್ರಹಿಸಿದ್ದಾರೆ.

ಜಾಗತೀಕರಣದ ಭಾಗವಹಿಸುವಿಕೆಯು ಮಧ್ಯಪ್ರಾಚ್ಯ ರಾಜ್ಯಗಳಲ್ಲಿ ಸ್ಥಿರವಾದ ಆರ್ಥಿಕ ಬೆಳವಣಿಗೆಯನ್ನು ಪಡೆಯಲು ಉತ್ತಮ ಕಾರಣವಾಗಿದೆ ವಾಸ್ತವವಾಗಿ ಜಾಗತೀಕರಣ ಮತ್ತು ಸಾಮಾಜಿಕ ಬದಲಾವಣೆಯಲ್ಲಿ ಅದರ ಬಳಕೆಯು ಪ್ರದೇಶದ ಸ್ಥಿರತೆ ಮತ್ತು ಜಾಗತಿಕ ಆರ್ಥಿಕತೆಗೆ ಆಳವಾದ ಪ್ರಾಮುಖ್ಯತೆಯನ್ನು ಹೊಂದಿದೆ. ಮಧ್ಯಪ್ರಾಚ್ಯ ದೇಶಗಳು ಜಾಗತೀಕರಣವನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಬೇಕು.  ಜಾಗತಿಕ ಆರ್ಥಿಕತೆಯೊಂದಿಗೆ ಈ ಕನಿಷ್ಠ ಜಾಗತೀಕೃತ ಪ್ರದೇಶದ ಏಕೀಕರಣವನ್ನು ಪಡೆಯಲು ಮತ್ತು ಪ್ರದೇಶದ ಆರ್ಥಿಕ ಅಭಿವೃದ್ಧಿ ಪ್ರಕ್ರಿಯೆಗೆ ಅಂತರರಾಷ್ಟ್ರೀಯ ಸಂಸ್ಥೆಗಳ ಬೆಂಬಲವನ್ನು ಉತ್ತೇಜಿಸಲು ಜಾಗತೀಕರಣ ಮತ್ತು ಈ ಪ್ರದೇಶದ ಮೇಲೆ ಅದರ ಪ್ರಭಾವವನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯ. ಸಾಮಾಜಿಕ ಬದಲಾವಣೆಯ ಮೇಲೆ ಜಾಗತೀಕರಣದ ಪ್ರಭಾವವನ್ನು ಮಧ್ಯಪ್ರಾಚ್ಯ ರಾಷ್ಟ್ರಗಳ ದೃಷ್ಟಿಕೋನದಿಂದ ನೋಡಿದಾಗ ಸಮಾಜದ ಮೇಲೆ ಸಕರಾತ್ಮಕ ಮತ್ತು ಋಣಾತ್ಮಕ ಪ್ರಭಾವವನ್ನು ಭೀರಿರುವುದನ್ನು ಕಾಣಬಹುದಾಗಿದೆ. ವಿಶ್ವ ರಾಜಕಾರಣದಲ್ಲಿಯೂ ಕೂಡ ಪ್ರಮುಖ ಸ್ಥಾನವನ್ನು ಹೊಂದಿದೆ.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಮೇಲಿನ ಅಂಶಗಳನ್ನು ಗಮನಿಸಿದಾಗ ಅರಬ್ ಸಂಯುಕ್ತ ಸಂಸ್ಥಾನದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಮೇಲೆ ಜಾಗತೀಕರಣವು ತನ್ನ ಹಿಡಿತವನ್ನು ಸಾಧಿಸಿದೆ ಎಂದರೆ ತಪ್ಪಾಗಲಾರುದು.  ಈ ಹಿನ್ನಲೆಯಲ್ಲಿ ಸಾಂಸ್ಕೃತಿಕ ಏಕತೆಯನ್ನು ವಿಲೀನಕರಿಸುವ ಸಲುವಾಗಿ ಮತ್ತು ವಿಭಜಿತ ಆರ್ಥಿಕ ಕುಸಿತವನ್ನು ಅಭಿವೃದ್ಧಿ ಪಡಿಸುವಲ್ಲಿ ಮಧ್ಯ ಏಷ್ಯಾ ಮತ್ತು ಪ್ರಾಚೀನ ಅರಬ್ ಸಂಸ್ಕೃತಿ ವ್ಯವಸ್ಥಿತವಾದ ರೂಪುರೇಷೆಯನ್ನು ಸಮತೋಲನಕರಿಸುವ ನಿಟ್ಟಿನಲ್ಲಿ ಯಶಸ್ವಿಯಾಗಿದೆ.

**ಪರಾಮರ್ಶನ ಗ್ರಂಥಗಳು**


- George Ritzer Rethinking. (2003). Globalization: Glocalization/Grobalization and Something/Nothing. American Sociological Association, Vol-21 (3). Pp-193-209
- Prakash C. Jain. (2015). South Asian Migration of Gulf  Countries :History, Policies, Development. Routledge India, New Delhi.
- Ramakrishnan A.K. (2011). Society & Change in the Contemporary Gulf. New Century Publications. New Delhi.
- Sanjeev Mahajan. (2007).Globalization and  Social Change.  Lotus Press, New Delhi.
- Sujata Ashwarya Cheema. (2010). West Asia: Civil Society, Democracy and State. New Century Publications. New Delhi.